ಗಳಾಗಿದ್ದಾರೆ. ದಯವಿಟ್ಟು ಸರ್ಕಾರ ಕ್ರಮಕೈಗೊಂಡು ಉತ್ತರ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಎಂದಿನಂತೆ ಇದೂ ಕೂಡ ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗುವಂತಹ ವಿಚಾರವಲ್ಲ. ಬಹಳ ಗಂಭೀರವಾಗಿ ಸ್ಥಳೀಯರಿಗೆ ರ್‍ಯಾಫ್ಟಿಂಗ್ ಕೊಡಬೇಕೆಂದು ಏನು ಹೇಳಿದ್ದಾರೆ ಅದನ್ನು ಇಲಾಖೆಯ ಮೂಲಕ ಯಾವ ರೀತಿ ಮಾಡಬೇಕೆಂದು ಪರಿಶೀಲಿಸುತ್ತೇನೆ.

ಅಧ್ಯಕ್ಷರು : ಇದು ಶೂನ್ಯ ವೇಳೆಯಲ್ಲಿ ಬರುವುದಿಲ್ಲವೆಂದು ಆಗಿನಿಂದ ಹೇಳುತ್ತಿದ್ದಾರೆ. ಮತ್ತೆ ಮತ್ತೆ ಪ್ರಸ್ತಾಪ ಮಾಡುವುದು ಬೇಡ.

12) ವಿಷಯ : ಅರಕಲಗೂಡಿನ ಪುಟ್ಟೇಗೌಡರ ಮಗಳನ್ನು ಕ್ರಿಮಿನಲ್ ಕೇಸ್ ಹಾಕಿ ಸಸ್ಪೆಂಡ್ ಮಾಡಿರುವ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ (ಹಾಸನ) : ಮಾನ್ಯ ಅಧ್ಯಕ್ಷರೆ ಕಳೆದ ಸಾರಿ Law Minister ಉತ್ತರ ಕೊಟ್ಟಿದ್ದಾರೆ ಎಲ್ಲಾ ಆಗಿದೆ. ಅರಕಲಗೂಡಿನ ಪುಟ್ಟೇಗೌಡರ ಮಗಳನ್ನು ಏನಿಲ್ಲ ಎಂತಿಲ್ಲ ಕ್ರಿಮಿನಲ್ ಕೇಸ್ ಹಾಕಿ ಸಸ್ಪೆಂಡ್ ಮಾಡಿದ್ದರು. ಅದನ್ನು last time ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಮಂತ್ರಿಗಳು ಇಬ್ಬರೂ ಕೇಸನ್ನು ವಾಪಸ್ಸು ತೆಗೆದುಕೊಳ್ಳುವಂತೆ ಹೇಳಿದ್ದಾರೆ. ದುರುದ್ದೇಶಪೂರಕವಾಗಿ ಬೇಕೆಂದು Education Commissioner ರವರು ಈ ರೀತಿ ಮಾಡಿ ತೊಂದರೆ ಕೊಡಬೇಕೆಂದು ಹೇಳಿದರೆ ಅರ್ಥವೇನು? ಕಳೆದ ಸಾರಿ ಅದನ್ನು ತಮ್ಮ ಗಮನಕ್ಕೂ ಕೂಡ ತಂದಿದ್ದೇವೆ. ತಾನೇ ವಿಧಾನಸಭೆಯಲ್ಲಿ ಆ ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ಒಂದು ಶಾಲೆಯನ್ನು shift ಮಾಡಿದ್ದಾರೆ. Financial ಇದ್ದಿಲ್ಲಾ ಏನಿಲ್ಲ. ಯಾರೋ AEO ಮಾಡಿ ಕಳುಹಿಸಿರುವುದು. AEO suspend ಇಲ್ಲಾ ಏನಿಲ್ಲ. ಬೇರೆ ಯಾವ Officers ಗಳದು ಏನಿಲ್ಲಾ. ಬೇಕೆಂದು ದುರುದ್ದೇಶದಿಂದ ಅವರು ಸ್ವಾತಂತ್ರ್ಯ ಹೋರಾಟಗಾರರ ಮಗಳಿಗೆ ತೊಂದರೆ ಕೊಟ್ಟಿದ್ದಾರೆ. ಇಲ್ಲೇ ಅರಕಲಗೂಡು ಎಂ.ಎಲ್.ಎ. ಮಂಜಣ್ಣನವರಿದ್ದಾರೆ ಬೇಕಾದರೆ ಕೇಳಿ. ಶ್ರೀ ಮಂಜಣ್ಣ ಮತ್ತು ನಾವು last time ಹೇಳಿದ್ದೆವು. ಅವರ ಹೆಸರು ಪದ್ಮಮ್ಮ ಎಂದು ಇರಬೇಕು. ಉಪನಿರ್ದೇಶಕರು, ಡಯಟ್ ಎಂದು. ದಯಮಾಡಿ ಮಾನ್ಯ ಅಧ್ಯಕ್ಷರೆ, ಇದನ್ನು last time ಕೂಡ ನಿಮ್ಮ ಗಮನಕ್ಕೆ

ತಂದಿದ್ದೇವೆ ಮತ್ತು ಇಂದು ಶೂನ್ಯವೇಳೆಯಲ್ಲೂ ತಂದಿದ್ದೇವೆ. ದಯಮಾಡಿ ಅವರ ಮೇಲೆ ಏನು case ಹಾಕಿದ್ದೀರೋ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಕ್ರಿಮಿನಲ್ ಕೇಸ್ ಹಾಕಿ ದುರುದ್ದೇಶ ಪೂರಿತವಾಗಿ ಅವರಿಗೆ ತೊಂದರೆ ಕೊಡುವುದಾ?

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸದನದಲ್ಲಿ ಈ ಕೇಸನ್ನು ವಾಪಸ್ಸು ತೆಗೆದುಕೊಳ್ಳುವು ದಕ್ಕಾಗುವುದಿಲ್ಲ. ಆ ಕೇಸ್ ಯಾವ ಹಂತದಲ್ಲಿದೆ ಎಂದು ನೋಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ರಮಾನಾಥ್ ರೈ ಅವರು.

13) ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕುಡಿಯುವ ನೀರಿನ ಯೋಜನೆಗೆ 'ತುಂಬೆ' ವೆಂಟೆಡ್ ಡ್ಯಾಮ್‌ನ್ನು ಎತ್ತರಕ್ಕೆ ಏರಿಸುವ ಬಗ್ಗೆ

ಶ್ರೀ ಬಿ. ರಮಾನಾಥ್ ರೈ (ಬಂಟ್ವಾಳ) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಕುಡಿಯುವ ನೀರಿನ ಯೋಜನೆಗೆ 'ತುಂಬೆ' ವೆಂಟೆಡ್ ಡ್ಯಾಮ್‌ನ್ನು ಎತ್ತರಕ್ಕೆ ಏರಿಸುವಂತಹ ಕಾರ್ಯಕ್ರಮ ನಡೆಯುತ್ತಿವೆ. ಇದರ ಪರಿಣಾಮವಾಗಿ ಅಲ್ಲಿನ ಸುತ್ತಮುತ್ತಲಿನ ಗ್ರಾಮಗಳ ರೈತರ ಜಮೀನು ಮುಳುಗಡೆಯಾಗುತ್ತದೆ. ಇಲ್ಲಿಯವರೆಗೆ ಎಷ್ಟು ಜಮೀನು ಮುಳುಗಡೆ ಯಾಗಿದೆ, ಮುಳುಗಡೆಯಾಗಿರುವ ಜಮೀನಿಗೆ ಏನು ಪರಿಹಾರ? ಕುಡಿಯುವ ನೀರಿನ ಅನಿವಾರ್ಯತೆಯಿಂದಾಗಿ ಡ್ಯಾಮ್‌ನ್ನು ಎತ್ತರಕ್ಕೆ ಏರಿಸುವಂತಹ ಕಾಮಗಾರಿ ಮಾಡಬೇಕಾಗಿರುವುದು ಇಂದು ಅವಶ್ಯಕವಾಗಿದೆ. ಆದರೆ ಆ ಕಾಮಗಾರಿಯಿಂದ ಯಾವ ರೈತರಿಗೆ ತೊಂದರೆಯಾಗಿದೆ, ತೊಂದರೆಯಾ ಗಿರುವ ರೈತನಿಗೆ ಏನು ಕ್ರಮ ಕೈಗೊಳ್ಳಬೇಕು, ರೈತರ ಜಮೀನು ನಿರ್ದಿಷ್ಟವಾಗಿ ಎಷ್ಟು ಮುಳುಗಡೆಯಾಗುತ್ತದೆನ್ನುವ ಬಗ್ಗೆ ಇದುವರೆವಿಗೂ ರೈತರಿಗೆ ಮಾಹಿತಿ ಕೊಡುತ್ತಿಲ್ಲ. ಈ ಬಗ್ಗೆ ಕಂದಾಯ ಇಲಾಖೆಯ ಮೇಲೆ ಎಷ್ಟು ಒತ್ತಡಗಳನ್ನು ತಂದರೂ ಸಹ ಎಷ್ಟು ಜಮೀನು ಮುಳಗಡೆಯಾಗುತ್ತೆ? ಮುಳುಗಡೆಯಾದರೆ ಏನೇನು ಪರಿಹಾರ ಕೊಡಲಾಗುತ್ತದೆ ಎಂಬ ಬಗ್ಗೆ ಇದುವರೆವಿಗೂ ಯಾವುದೇ ನಿರ್ದಿಷ್ಟವಾದ ಕ್ರಮವಾಗಲಿ, ಪರಿಹಾರ ಸೂತ್ರವಾಗಲಿ ಇಲ್ಲಿಯ